**ಅಕ್ಟೋಬರ್-2021**

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಸ್ವಚ್ಛ ಭಾರತ — ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ | ಸ್ವಚ್ಛ ಸಂಕೀರ್ಣ | ಸ್ವಚ್ಛಮೇವ ಜಯತೇ

# ಸ್ವಚ್ಛತಾವಾಣಿ

**ವಾರ್ತಾಪತ್ರ**

ಜಲೋತ್ಸವ — ಮನೆ ಮನೆಗೆ ಗಂಗೆ | Har Ghar Jal — Jal Jeevan Mission

## "Dus Ka Dum Swachhata Har Dum"



ಇಡೀ ದೇಶಾದ್ಯಂತ ಸ್ವಚ್ಛತೆಯ ಅಲೆಯನ್ನು ಎಬ್ಬಿಸಿದ **ಸ್ವಚ್ಛ ಭಾರತ್ ಮಿಷನ್(ಗ್ರಾ)** ಯೋಜನೆಯಿಂದಾಗಿ ಭಾರತವನ್ನು 2ನೇ ಅಕ್ಟೋಬರ್ 2019 ರಂದು ಬಯಲು ಬಹಿರ್ದೆಸೆ ಮುಕ್ತ ದೇಶವನ್ನಾಗಿ ಘೋಷಿಸಲಾಯಿತು. ಇದೀಗ ಬಯಲು ಬಹಿರ್ದೆಸೆ ಮುಕ್ತ ಸುಸ್ಥಿರತೆಯನ್ನು ಕಾಪಾಡಿಕೊಳ್ಳುವ ಜೊತೆಗೆ ಇಡೀ ದೇಶವನ್ನು **ODF Plus** ಅನ್ನಾಗಿ ಮಾಡುವ ಗುರಿ ಹೊಂದಲಾಗಿದ್ದು, ಪ್ರಸ್ತುತ ದೇಶಾದ್ಯಂತ **ಸ್ವಚ್ಛ ಭಾರತ್ ಮಿಷನ್(ಗ್ರಾ) ಹಂತ 2** ಜಾರಿಯಲ್ಲಿದ್ದು, ಈ ನಿಟ್ಟಿನಲ್ಲಿ ಹತ್ತು ಹಲವು ಆಂದೋಲನಗಳನ್ನು ಆಯೋಜಿಸಲಾಗುತ್ತಿದೆ. ರಾಜ್ಯದಲ್ಲಿಯೂ **ODF Plus** ಚಟುವಟಿಕೆಗಳನ್ನು ಅನುಷ್ಠಾನ ಮಾಡಲಾಗುತ್ತಿದ್ದು, ಈ ನಿಟ್ಟಿನಲ್ಲಿ ಕೇಂದ್ರ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಜಲಶಕ್ತಿ ಮಂತ್ರಾಲಯ ಭಾರತ ಸರ್ಕಾರವು ಬೃಹತ್ ಪ್ರಮಾಣದಲ್ಲಿ ನಾಗರೀಕರನ್ನು ಭಾಗವಹಿಸುವಂತೆ ಮಾಡಲು ಹಾಗೂ ನೈರ್ಮಲ್ಯ ಮತ್ತು ಶುಚಿತ್ವದ ಬಗ್ಗೆ ಗ್ರಾಮೀಣ ಸಮುದಾಯದಲ್ಲಿ ಹೆಚ್ಚಿನ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ 2ನೇ ಅಕ್ಟೋಬರ್ 2021 ರಿಂದ 26ನೇ ಜನವರಿ 2022ರವರೆಗೆ **'Dus Ka Dum Swachhata Har Dum'** ಎಂಬ ಹೆಸರಿನ ಬೃಹತ್ ಆಂದೋಲನವನ್ನು ಆಯೋಜಿಸಲಾಗಿದ್ದು, ಈಗಾಗಲೇ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಈ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ.





## "ವಿಶ್ವ ಕೈ ತೊಳೆಯುವ ದಿನಾಚರಣೆ"

15ನೇ ಅಕ್ಟೋಬರ್ ಅನ್ನು ವಿಶ್ವದಾದ್ಯಂತ **ವಿಶ್ವ ಕೈ ತೊಳೆಯುವ** ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದ್ದು, ರಾಜ್ಯದಲ್ಲಿ **'ನಮ್ಮ ಭವಿಷ್ಯವು ಕೈಯಲ್ಲಿದೆ–ಒಟ್ಟಿಗೆ ಮುನ್ನಡೆಯೋಣ'** ಎಂಬ ಥೀಮ್‌ನಡಿಯಲ್ಲಿ **ಸ್ವಚ್ಛ ಭಾರತ್ ಮಿಷನ್(ಗ್ರಾ)** ಯೋಜನೆಯಡಿಯಲ್ಲಿ ಮನೆಗಳಲ್ಲಿ ಸ್ವಚ್ಛತೆ ಮತ್ತು ಸುಧಾರಿತ ಆರೋಗ್ಯಕ್ಕಾಗಿ ಕೈ ನೈರ್ಮಲ್ಯ ಅಭ್ಯಾಸಗಳನ್ನು ನಾಗರೀಕರಿಗೆ ತಿಳಿಸಿಕೊಡುವುದು, ಪ್ರತಿ ಬಾರಿಯೂ ಸಾಬೂನಿನಿಂದ ಕೈ ತೊಳೆಯುವ ಅಭ್ಯಾಸಗಳನ್ನು ರೂಢಿಸಿಕೊಳ್ಳುವಂತೆ ಮಾಡುವ ನಿಟ್ಟಿನಲ್ಲಿ ರಾಜ್ಯಾದ್ಯಂತ ಎಲ್ಲೆಡೆ ಕೈ ನೈರ್ಮಲ್ಯ ಅಭ್ಯಾಸದ ಕುರಿತು ತರಬೇತಿ ಹಾಗೂ ಪ್ರಾತ್ಯಕ್ಷಿಕೆ ಮೂಲಕ ನಾಗರೀಕರಿಗೆ, ವಿದ್ಯಾರ್ಥಿಗಳಿಗೆ ಕೈತೊಳೆಯುವ ಅಭ್ಯಾಸಗಳ ಕುರಿತು ರಾಜ್ಯಾದ್ಯಂತ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಯಿತು.





## ತರಬೇತಿ ಕಾರ್ಯಕ್ರಮಗಳು

### "ಕುಡಿಯುವ ನೀರಿನ ಮೂಲಗಳ ಸುಸ್ಥಿರತೆ" ಕುರಿತ ತರಬೇತಿ ಕಾರ್ಯಾಗಾರ



ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ರಾಜ್ಯದಲ್ಲಿ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ **ಜಲ ಜೀವನ್ ಮಿಷನ್** ಯೋಜನೆಯನ್ನು ಅನುಷ್ಠಾನ ಮಾಡುತ್ತಿದ್ದು ಈ ನಿಟ್ಟಿನಲ್ಲಿ ದಿನಾಂಕ: 5–10–2021 ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ನೇತೃತ್ವದಲ್ಲಿ **Line Dept.** ಅಧಿಕಾರಿಗಳಿಗೆ **'ಕುಡಿಯುವ ನೀರಿನ ಮೂಲಗಳ ಸುಸ್ಥಿರತೆ– ಸವಾಲುಗಳು ಮತ್ತು ಪರಿಹಾರ'** ವಿಷಯ ಸಂಬಂಧ ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಕಾರ್ಯಾಗಾರದಲ್ಲಿ ಆಯುಕ್ತರು ಗ್ರಾ.ಕು.ನೀ&ನೈ ಇಲಾಖೆ, ಸರ್ಕಾರದ ಕಾರ್ಯದರ್ಶಿ, ಭಾರತ ಸರ್ಕಾರ, ಸಣ್ಣ ನೀರಾವರಿ ಇಲಾಖೆ, ಪ್ರಾದೇಶಿಕ ನಿರ್ದೇಶಕರು, **CGWB. CE,** ಗ್ರಾ.ಕು.ನೀ&ನೈ ಇಲಾಖೆ ಸೇರಿದಂತೆ ಇತರೆ **Line Dept.**ಗಳ ಹಿರಿಯ ಅಧಿಕಾರಿಗಳು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.





### "ಜಲ ಜೀವನ್ ಮಿಷನ್ ಅನುಷ್ಠಾನ ಕುರಿತ ಕಾರ್ಯಾಗಾರ"

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಜಲ ಜೀವನ್ ನೀರನ್ನು ಒದಗಿಸುವ ಗುರಿ ಹೊಂದಲಾಗಿದ್ದು, ಈ ನಿಟ್ಟಿನಲ್ಲಿ ರಾಜ್ಯದಲ್ಲಿ ಯೋಜನೆಯ ಅನುಷ್ಠಾನವನ್ನು ವೇಗಗೊಳಿಸುವ ನಿಟ್ಟಿನಲ್ಲಿ ಸರ್ಕಾರದ **ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.** ಇವರ ನೇತೃತ್ವದಲ್ಲಿ ದಿನಾಂಕ: 18–10–2021ರಂದು ಇಲಾಖೆಯ ಎಂಜಿನಿಯರಿಂಗ್ ಶಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳಿಗೆ ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಕಾರ್ಯಾಗಾರದಲ್ಲಿ **ಆಯುಕ್ತರು ಗ್ರಾ.ಕು.ನೀ&ನೈ ಇಲಾಖೆ, ಮುಖ್ಯ ಅಭಿಯಂತರರು, ಗ್ರಾ.ಕು.ನೀ&ನೈ ಇಲಾಖೆ** ಸೇರಿದಂತೆ ಶಾಖೆಯ ಎಲ್ಲಾ ಅಧಿಕಾರಿಗಳು ಹಾಜರಿದ್ದರು.





### "ರಾಷ್ಟ್ರೀಯ ಜಲ ಜೀವನ್ ಮಿಷನ್ ತಂಡದಿಂದ ರಾಜ್ಯ ಪ್ರವಾಸ"



ಕೇಂದ್ರ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ನಿರ್ದೇಶಕರಾದ ಅಮಿತ್ ಶುಕ್ಲಾ ನೇತೃತ್ವದ ರಾಷ್ಟ್ರೀಯ **ಜಲ ಜೀವನ್ ಮಿಷನ್** ಯೋಜನೆಯ 6 ಜನ ಸದಸ್ಯರ ತಂಡದಿಂದ 27ನೇ ಅಕ್ಟೋಬರ್ ರಿಂದ 30ನೇ ಅಕ್ಟೋಬರ್ ವರೆಗೆ ರಾಜ್ಯ ಪ್ರವಾಸವನ್ನು ಹಮ್ಮಿಕೊಳ್ಳಲಾಗಿತ್ತು. ರಾಜ್ಯ ಪ್ರವಾಸದ ಮೊದಲ ದಿನದಂದು, **ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ** ಹಾಗೂ **ಮುಖ್ಯ ಅಭಿಯಂತರರು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ** ಸೇರಿದಂತೆ ಇಲಾಖೆಯ ಇತರೆ ಅಧಿಕಾರಿಗಳಿಂದ ರಾಜ್ಯದಲ್ಲಿ **ಜಲ ಜೀವನ್ ಮಿಷನ್** ಯೋಜನೆಯ ಅನುಷ್ಠಾನದ ಕುರಿತು ಕೈಗೊಂಡಿರುವ ಕ್ರಮಗಳು ಹಾಗೂ ಪ್ರಗತಿ ಕುರಿತು ಮಾಹಿತಿಯನ್ನು ಪಡೆದರು. ಬಳಿಕ ತುಮಕೂರು, ಮಂಡ್ಯ, ಕೋಲಾರ ಜಿಲ್ಲೆಗಳಿಗೆ ತಲಾ ಇಬ್ಬಿಬ್ಬರಂತೆ ಭೇಟಿ ನೀಡಿ ಜಿಲ್ಲೆಗಳಲ್ಲಿ **ಜಲ ಜೀವನ್ ಮಿಷನ್** ಯೋಜನೆಯ ಅನುಷ್ಠಾನ ಕುರಿತು ಪರಿಶೀಲನೆ ನಡೆಸಿದರು. ಬಳಿಕ ತಮ್ಮ ಕ್ಷೇತ್ರ ಭೇಟಿಯ ವೇಳೆ ಗಮನಿಸಿದ ಅಂಶಗಳ ಕುರಿತು 30ನೇ ಅಕ್ಟೋಬರ್ ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾ.ಅ ಮತ್ತು ಪಂ ರಾಜ್ ಇಲಾಖೆ, ಇವರ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ವಿಷಯ ಮಂಡಿಸಿದರು.



